(ಇಂದು ದಿನಾಂಕ:03-03-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**<u>ಪಾಟೀಸವಾಲು: ಪ್ರತಿವಾದಿಯರ ಪರ ವಕೀಲರಿಂದ:</u>**

1. ನನ್ನ ಮತ್ತು ರೋಹಿಣಿ ದೇವಿರವರ ಮಧ್ಯೆ ಯಾವುದೇ ವ್ಯವಹಾರ ಇಲ್ಲ. 7 ರಾಗಿ (ಡಿ) ಗ್ರಾಮದ ಸರ್ವೇ ನಂ. 4 ರಲ್ಲಿ ನಾನು ಮತ್ತು ಪ್ರತಿವಾದಿಯರು ಖರೀದಿದಾರರು ಇರುತ್ತೇವೆ ಎಂದರೆ ಸರಿ. ನನಗೂ ಮತ್ತು ಪ್ರತಿವಾದಿ ರೋಹಿಣಿದೇವಿರವರಿಗೆ ಮಾರಾಟ ಮಾಡಿದ ವ್ಯಕ್ತಿ ಬೇರೆ ಬೇರೆ ಎಂದರೆ ಸರಿ. ಈಗ ನಾವೆಲ್ಲರೂ ನಾಲ್ಕು ಜನ ಅಣ್ಣತಮ್ಮಂದಿರು ಮಧ್ಯೆ ಖಾಸಗಿ ಖಂಡ ಪತ್ರ ಮುಖಾಂತರ ಕುಟುಂಬದ ಆಸ್ತಿಗಳನ್ನು ಬೇರೆ ಬೇರೆ ಮಾಡಿಕೊಂಡಿರುತ್ತೇವೆ. ಸದರಿ ಖಂಡ ಪತ್ರ ನನ್ನ ಬಳಿ ಇದೆ. ವಿವಾದಿತ ಜಮೀನು ಹೊರತುಪಡಿಸಿ ಬೇರೆ ಆಸ್ತಿಗಳ ವಿಭಾಗ ಆಗಿದೆ. ಕೇಳಿದ್ದಲ್ಲಿ ವಿಭಾಗ ಪತ್ರದ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸುತ್ತೇನೆ. ನಾನು ಪ್ರತಿವಾದಿಯರಿಗೆ ಅದರ ಪ್ರತಿಯನ್ನು ಮುಂದಿನ ವಿಚಾರಣೆ ದಿನಾಂಕದಂದು ಸಲ್ಲಿಸಲು ಸಿದ್ದನಿದ್ದೇನೆ.

2. ನಾನು ಪ್ರತಿವಾದಿ ರೋಹಿಣಿದೇವಿ ವಿರುದ್ದ ದಾವೆ ಸಲ್ಲಿಸಿದ್ದೇನೆ. ನಾವು ಪ್ರಥಮ ದರ್ಜೆಯ ವಾರಸುದಾರರು ಅಂತಾ ದಾವೆ ಸಲ್ಲಿಸಿದ್ದೇವೆ. ನನಗೆ ಇಬ್ಬರು ಅಕ್ಕಂದಿರು ಇದ್ದರು, ಸುಮನ 15 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ, ಇತ್ತೀಚಿಗೆ ಇನ್ನೊಬ್ಬರು ಕುಸುಮಾ ತೀರಿಕೊಂಡಿರುತ್ತಾರೆ. ಅವರಿಗೆ ಮಕ್ಕಳು ಇರುತ್ತಾರೆ. ಕುಸುಮಾ ಮತ್ತು ಸುಮನ್ ರವರಿಗೆ ಈಗಾಗಲೇ ಅವರಿಗೆ ಏನೇನು ಕೊಡಬೇಕು ಅವುಗಳನ್ನು ಕೊಟ್ಟಿದ್ದೇವೆ. ಸದರಿ ವಿಷಯ ನಾನು ನನ್ನ ವಾದಪತ್ರದಲ್ಲಿ ಹೇಳಿಲ್ಲ. ಉದ್ದೇಶಪೂರ್ವಕವಾಗಿ ನಾನು ಅವರನ್ನು ಬಿಟ್ಟು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಮರೇಮಾಚಿ ನಾನು ದಾವೆ ಸಲ್ಲಿಸಿದ್ದೇನೆ, ಕಾರಣ ನಾನು ಶಿಕ್ಷೆಗೆ ಅರ್ಹನಾಗಿದ್ದೇನೆ ಎಂದರೆ ಸರಿಯಲ್ಲ.

3. ನಾನು ವಾದ ಪತ್ರದ ಖಂಡಿಕೆ ಸಂಖ್ಯೆ 10 ರಲ್ಲಿ ಹೇಳಿದ ಪ್ರಕಾರ ನಾನು 12 ವರ್ಷಗಳ ಹಿಂದೆ ತಹಶೀಲ್ದಾರ ನ್ಯಾಯಾಲಯದಲ್ಲಿ ಕಂದಾಯ ಪ್ರಕರಣ ಸಲ್ಲಿಸಿದ್ದೇನೆ. ಈಗ ಅದು ವಿಚಾರಣೆಯಲ್ಲಿ ಇಲ್ಲ. ಅದರ ವಿರುದ್ದ ನಾನು ಲಿಂಗಸಗೂರು ಸಹಾಯಕ ಆಯುಕ್ತಕರ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದೆ. ಸದರಿ ಲಿಂಗಸಗೂರು ಸಹಾಯಕ ಆಯುಕ್ತಕರ ನ್ಯಾಯಾಲಯದಲ್ಲಿ ಮೇಲ್ಮನವಿಯಲ್ಲಿನ ಆದೇಶದ ಪ್ರತಿಯನ್ನು ನಾನು ನೋಡಿಲ್ಲ. ನಮ್ಮ ವಕೀಲರಿಗೆ ತಹಶೀಲ್ದಾರ ನ್ಯಾಯಾಲಯದಲ್ಲಿ ಕಂದಾಯ ಪ್ರಕರಣ ಬಗ್ಗೆ ಮತ್ತು ಲಿಂಗಸಗೂರು ಸಹಾಯಕ ಆಯುಕ್ತಕರ ನ್ಯಾಯಾಲಯದಲ್ಲಿ ಮೇಲ್ಮನವಿ ಬಗ್ಗೆ ನಾನು ಮಾಹಿತಿ ಕೊಟ್ಟಿದ್ದೇನೆ. ನನ್ನ ವಕೀಲರು ಅವುಗಳ ಬಗ್ಗೆ ನನಗೆ ಏನೂ ಹೇಳಿಲ್ಲ.

4. ನಾನು ದಾವೆ ಸಲ್ಲಿಸುವ ದಿನದಂದು ಚಾಲ್ತಿಯಲ್ಲಿರುವ ಚಕಬಂದಿಯನ್ನು ದಾವೆಯಲ್ಲಿ ಬರೆಸಿದ್ದೇನೆ. ದಾವಾ ಆಸ್ತಿಯ ಪೂರ್ವಕ್ಕೆ ಜೈರಾ ಖಾತುಲ್ ಮತ್ತು ಶರಬಣ್ಣರವರ ಜಮೀನು ಇದೆ. ನಾನು ನನ್ನ ವಾದಪತ್ರದಲ್ಲಿ ಖರೀದಿ ಪತ್ರದಲ್ಲಿಯ ಚಕಬಂದಿಯನ್ನು ಪ್ರಸ್ತುತ ದಾವೆಯಲ್ಲಿ ಬರೆಸಿದ್ದೇನೆ, ಮತ್ತು ದಾವೆ ಸಲ್ಲಿಸಿರುವ ದಿನದಂದು ಇದ್ದ ಚಕಬಂದಿಯನ್ನು ಬರೆಸಿಲ್ಲ ಎಂದರೆ ಸರಿ. ಪೂರ್ವಕ್ಕೆ ಜೈರಾ ಖಾತುಲ್‌ರವರು 15 ವರ್ಷಗಳಿಂದ ಅವರ ಜಮೀನು ಇರುವುದಿಲ್ಲ.

5. ನನ್ನ ತಾಯಿ ಪಿ ಎಲ್ ನರಸಿಂಹರವರ ಬಳಿ ಖರೀದಿ ಮಾಡಿದ್ದಾರೆ. ನನ್ನ ತಾಯಿರವರು 9 ಎಕರೆ 5 ಗುಂಟೆ ಮಾತ್ರ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಖರೀದಿ ಪತ್ರದಲ್ಲಿ ಉದ್ದೇಶ ಪೂರ್ವಕವಾಗಿ 11 ಎಕರೆ 28 ಗುಂಟೆ ಮತ್ತು ಪೋಟ ಖರಾಬ 2 ಎಕರೆ 23 ಗುಂಟೆ ಅಂತಾ ತೋರಿಸಿದ್ದಾರೆ ಎಂದರೆ ಸರಿಯಲ್ಲ. ಪಿ ಎಲ್ ನರಸಿಂಹರವರು ಖರೀದಿ ಮಾಡಿದ ಖರೀದಿ ಪತ್ರದ ನಕಲನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಉದ್ದೇಶಪೂರ್ವಕವಾಗಿ ನಾನು ಪಿ ಎಲ್ ನರಸಿಂಹರವರ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಪಿ ಎಲ್ ನರಸಿಂಹರವರು ಮಕ್ ಬುಲ್ಲಾ ಸೀತಾರಾಮದಾಸ್ ರವರಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿ. ಸದರಿ ಪಿ ಎಲ್ ನರಸಿಂಹರವರ ಹೆಸರಲ್ಲಿದ್ದ ಖರೀದಿ ಪತ್ರ ಸಂಖ್ಯೆ 1574/67-68

ನೇದ್ದರ ಪ್ರತಿಯನ್ನು ಸಾಕ್ಷಿಗೆ ತೋರಿಸಲಾಗಿ, ಅದನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು **ನಿಡಿ-1** ಎಂದು ಗುರುತಿಸಲಾಯಿತು. ಸದರಿ ಖರೀದಿ ಪತ್ರದಲ್ಲಿ 9 ಎಕರೆ 5 ಗುಂಟೆ ಮಾತ್ರ ಪಿ ಎಲ್ ನರಸಿಂಹರವರು ಖರೀದಿ ಮಾಡಿದ ಬಗ್ಗೆ ನಮೂದು ಇದೆ ಎಂದರೆ ಸರಿ.

6. ನಿಡಿ-1 ಖರೀದಿ ಪತ್ರದಲ್ಲಿ ಪಿ ಎಲ್ ನರಸಿಂಹರವರು ಖರೀದಿ ಮಾಡಿದ ಕ್ಷೇತ್ರ 9 ಎಕರೆ 5 ಗುಂಟೆ ಮಾತ್ರ ಅಂತಾ ನಮೂದು ಇರುತ್ತದೆ ಎಂದರೆ ಸರಿ. ಸದರಿ ಖರೀದಿ ಪತ್ರದಲ್ಲಿ ಒಟ್ಟು ಕ್ಷೇತ್ರ 11 ಎಕರೆ 23 ಗುಂಟೆ, ಪೋಟ ಖರಾಬ 2 ಎಕರೆ 23 ಗುಂಟೆ ಸೇರಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಜೈರಾ ಖಾತುಂಬಿ ಮತ್ತು ಪಿ ಎಲ್ ನರಸಿಂಹರವರು ಸೇರಿ 25 ಎಕರೆ 23 ಗುಂಟೆ ಜಮೀನು ಖರೀದಿ ಮಾಡಿರುತ್ತಾರೆ. ಅದರಲ್ಲಿ 2 ಎಕರೆ ರಸ್ತೆಗಾಗಿ ಸ್ವಾಧೀನಪಡಿಸಿಕೊಳ್ಳಲಾಯಿತು. 2 ಎಕರೆ 20 ಗುಂಟೆ ಹಳ್ಳಕ್ಕೆ ಮತ್ತು ಕಲ್ಲು ಭೂಮಿಗೆ ಹೋಯಿತು. ತದನಂತರ ಜೈರಾ ಖಾತುಂಬಿ ಮತ್ತು ಪಿ ಎಲ್ ನರಸಿಂಹರವರು ತಲಾ 12 ಎಕರೆಯಂತೆ ಅವರವರ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರುತ್ತಾರೆ. ನಂತರ ಜೈರಾ ಖಾತುಂಬಿ ರವರು 16 ಎಕರೆ 20 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ. ಆದರೆ ಅವರು ಖರೀದಿ ಮಾಡಿದ್ದು 12 ಎಕರೆ ಜಮೀನು ಮಾತ್ರ. ಪಿ ಎಲ್ ನರಸಿಂಹರವರ 12 ಎಕರೆ ಜಮೀನಿನಲ್ಲಿ 2 ಎಕರೆ 28 ಗುಂಟೆ ಪೋಟ ಖರಾಬ ಜಮೀನು ಸೇರಿಸಿ ಖರೀದಿ ಮಾಡಿರುತ್ತಾರೆ.

7. ಜೈರಾ ಖಾತುಂಬಿ ಮತ್ತು ಪಿ ಎಲ್ ನರಸಿಂಹರವರು ತಲಾ 12 ಎಕರೆಯಂತೆ ಅವರವರ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರುತ್ತಾರೆ ಎನ್ನುವ ಬಗ್ಗೆ ನಾನು ಮ್ಯೂಟೇಶನ್ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ರಸ್ತೆಗೆ, ಹಳ್ಳಕ್ಕೆ, ಕಲ್ಲಿಗೆ ಜಮೀನು ಹೋದ ಬಗ್ಗೆ ನಾನು ಪಹಣಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. 2 ಎಕರೆ ಜಮೀನು ರಸ್ತೆಗೆ ಯಾರ ಜಮೀನಿನ ಪೈಕಿ ಹೋಗಿದೆ ಅಂತಾ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. 2 ಎಕರೆ ಜಮೀನು ರಸ್ತೆಗೆ ಭೂ ಸ್ವಾಧೀನ ಮಾಡಿಕೊಂಡ ಬಗ್ಗೆ ನಾನು ಎ.ಸಿ ಕಛೇರಿಯಿಂದ ಆದೇಶ ಸಲ್ಲಿಸಿಲ್ಲ. ರಸ್ತೆಗೆ, ಹಳ್ಳಕ್ಕೆ, ಕಲ್ಲಿಗೆ ಜಮೀನು ಹೋದ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ.

8. ಜೈರಾ ಖಾತುಂಬಿ ಮತ್ತು ಪಿ ಎಲ್ ನರಸಿಂಹರವರು ತಲಾ 12 ಎಕರೆಯಂತೆ ಅವರವರ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರುತ್ತಾರೆ ಎನ್ನುವ ಬಗ್ಗೆ ನನಗೆ ಜಮೀನು ಖರೀದಿ ಮಾಡುವ ವೇಳೆಯಲ್ಲಿ ಹೇಳಿದರು. ದಾವಾ ಜಮೀನು ಖರೀದಿ ಮಾಡುವಾಗ ನಾನು ಚಿಕ್ಕವನಾಗಿದ್ದೆ. ಆ ವೇಳೆಯಲ್ಲಿ ನಮ್ಮ ಅಣ್ಣ ಮತ್ತು ನನ್ನ ತಂದೆಯವರು ನೊಂದಣಿ ಕಛೇರಿಯಲ್ಲಿ ಹಾಜರಿದ್ದರು. ಜೈರಾ ಖಾತುಂಬಿ ಮತ್ತು ಪಿ ಎಲ್ ನರಸಿಂಹರವರು ತಲಾ 12 ಎಕರೆಯಂತೆ ಅವರವರ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರುತ್ತಾರೆ ಎನ್ನುವ ಬಗ್ಗೆ ನನಗೆ ನನ್ನ ಅಣ್ಣನವರು 14-15 ವರ್ಷಗಳ ಹಿಂದೆ ಹೇಳಿರುತ್ತಾರೆ. ಸದರಿ ವಿಷಯ ನಾನು ದಾವೆಯಲ್ಲಿ ಹೇಳಿ ಬರೆಸಿದ್ದೇನೆ.

9. ನನ್ನ ಜಮೀನು ಅಳತೆ ಮಾಡಲು ನಾನು ಅರ್ಜಿ ಸಲ್ಲಿಸಿಲ್ಲ. ನನ್ನ ಜಮೀನು ಅಳತೆ ಮಾಡಿಸಲು ನಾನು ಪ್ರಯತ್ನಪಟ್ಟಿಲ್ಲ. ಏಕೆಂದರೆ ಪಹಣಿಯಲ್ಲಿ ಜಮೀನು ಕಡಿಮೆ ಬರುತ್ತದೆ ಅಂತಾ ತಿಳಿದು ಮೋಜಣಿ ಮಾಡಿಸಿಲ್ಲ. ನಮ್ಮ ಜಮೀನು ವಾಸ್ತವವಾಗಿ ಇರುವುದೇ 9 ಎಕರೆ 5 ಗುಂಟೆ ಮಾತ್ರ ಆದರೂ ಕೂಡಾ 11 ಎಕರೆ 23 ಗುಂಟೆ ಅಂತಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು